# ಪ್ರಕಟಣೆ

ಸಾರ್ವಜನಿಕ ಶಿಕ್ಷಣ ಇಲಾಖೆಯ 2015ನೇ ಸಾಲಿನ, ಮೈಸೂರು ವಿಭಾಗದೊಳಗಿನ ಪ್ರೌಢಶಾಲಾ ಶಿಕ್ಷಕರ ಘಟಕದೊಳಗಿನ ಕೋರಿಕೆ ವರ್ಗಾವಣೆಯ ಅಂತಿಮ ಆದ್ಯತಾ ಪಟ್ಟಿ ಯನ್ನು ದಿನಾಂಕ 17–08–2015 **ರಂದು** ಇಲಾಖೆಯ ವೆಬ್‌ಸೈಟ್‌ನಲ್ಲಿ (www.schooleducation.kar.nic.in) ಪ್ರಕಟಿಸಲಾಗಿದೆ. ಕೋರಿಕೆ ವರ್ಗಾವಣೆಯ ಅಂತಿಮ ಆದ್ಯತಾ ಪಟ್ಟಿಯಲ್ಲಿರುವ ಶಿಕ್ಷಕ ವೃಂದದವರಿಗೆ ದಿನಾಂಕ 23–08–2015**ರಿಂದ** 25–08–2015**ರವರೆಗೆ** ಕೌನ್ಸಿಲಿಂಗ್ ಇದ್ದು, ಕೌನ್ಸಿಲಿಂಗ್‌ಗೆ ಹಾಜರಾಗುವ ಶಿಕ್ಷಕರ ವೃಂದದವರು ಈ ಕೆಳಕಂಡ ದಾಖಲೆಗಳೊಂದಿಗೆ ಜಂಟಿನಿರ್ದೇಶಕರ ಕಛೇರಿ, ಸಾ.ಶಿ.ಇಲಾಖೆ, ಡಿ ಸುಬ್ಬಯ್ಯ ರಸ್ತೆ, ಮೈಸೂರು ಇಲ್ಲಿ ಕೌನ್ಸಿಲಿಂಗ್‌ಗೆ ಹಾಜರಾಗಲು ಸಾರ್ವಜನಿಕ ಶಿಕ್ಷಣ ಇಲಾಖೆಯ ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಜಂಟಿನಿರ್ದೇಶಕರು (ಹೆ.ಪ್ರ.) ಶ್ರೀ ಬಿ.ಕೆ. ಬಸವರಾಜ ಇವರು ತಿಳಿಸಿರುತ್ತಾರೆ.

1. **ಇತ್ತೀಚಿನ ಭಾವಚಿತ್ರ ಲಗತ್ತಿಸಿರುವ ಸೇವಾ ದೃಢೀಕರಣ ಪತ್ರ** (**ಎಲ್ಲಾ ಪ್ರಕರಣಗಳ ಶಿಕ್ಷಕರುಗಳಿಗೆ ಕಡ್ಡಾಯ**)
2. **ತೀವ್ರತರಹ ಖಾಯಿಲೆ/ಅಂಗವಿಕಲ ಪ್ರಕರಣದವರು ಮೈಸೂರು ವಿಭಾಗದ ವೈದ್ಯಕೀಯ ಮಂಡಳಿಯಿಂದ ನೀಡಲಾದ ಮೂಲ ಪ್ರಮಾಣ ಪತ್ರ.**
3. **ಪತಿ ಮತ್ತು ಪತ್ನಿ ಪ್ರಕರಣದವರು ಪತಿ ಅಥವಾ ಪತ್ನಿಯ ಮೂಲ ಸೇವಾ ದೃಢೀಕರಣ ಪತ್ರದೊಂದಿಗೆ ಹಾಜರಾಗುವುದು.**
4. **ಪತಿ ಅಥವಾ ಪತ್ನಿ ಪ್ರಕರಣದವರು ಪತಿ ಅಥವಾ ಪತ್ನಿಯವರ ಮೂಲ ವಾಸ ಸ್ಥಳ ದೃಢೀಕರಣ ಪತ್ರ.**
5. **ವಿಧವಾ ಶಿಕ್ಷಕರ ಪ್ರಕರಣದವರು ಪತಿಯ ಮೂಲ ಮರಣ ಪ್ರಮಾಣ ಪತ್ರ ಅಥವಾ ಇತರೆ ಯಾವುದಾದರೂ ಒಂದು ದಾಖಲೆಯನ್ನು ಹಾಜರುಪಡಿಸುವುದು.**
6. **ಸೈನಿಕ ಪ್ರಕರಣದವರು ಸಕ್ಷಮ ಪ್ರಾಧಿಕಾರದಿಂದ ಪಡೆದ ಮೂಲ ಪ್ರಮಾಣ ಪತ್ರ.**
7. **ವಿವಾಹಿತ ಶಿಕ್ಷಕರ ಪ್ರಕರಣದಲ್ಲಿ ಪತಿ ಅಥವಾ ಪತ್ನಿ ಈ ಆದ್ಯತೆಯಡಿಯಲ್ಲಿ ಎಷ್ಟು ಬಾರಿ ವರ್ಗಾವಣೆ ಪಡೆದಿರುತ್ತಾರೆ ಎಂಬ ಬಗ್ಗೆ ಸಕ್ಷಮ ಅಧಿಕಾರಿಗಳಿಂದ ದೃಢೀಕರಣ ಪತ್ರ.**

ಸಹಿ/–

(ಬಿ.ಕೆ.ಬಸವರಾಜ)

ವಿಭಾಗೀಯ ಕಾರ್ಯದರ್ಶಿಗಳು ಹಾಗೂ

ಪದನಿಮಿತ್ತ ಜಂಟಿನಿರ್ದೇಶಕರು (ಹೆ.ಪ್ರ.)

ಸಾರ್ವಜನಿಕ ಶಿಕ್ಷಣ ಇಲಾಖೆ,

ಮೈಸೂರು ವಿಭಾಗ, ಮೈಸೂರು.